## ಪರಿಮಳ ಪ್ರಬಂಧ



ಬೆನ್ನ ಮೇಲೆ ಹೇರಿ ಹೊರಡಲನುವಾದಾಗ, ಉದ್ಯಾನವನದ ಪಾಲಕರು ತಡೆಯುತ್ತಾರೆ. ಪಾರಿಜಾತ ವೃಕ್ಷವು ಮಹಾರಾಣಿಯ ಪ್ರೀತಿಯ ವೃಕ್ಷವೆಂದೂ, ಅದನ್ನು ಬೇರೆ ಯಾರಿಗೂ ಕೊಡುವಂತಿಲ್ಲವೆಂದೂ ಹೇಳುತ್ತಾರೆ. ಅಮೂಲ್ಯ ವೃಕ್ಷವನ್ನು ಕೃಷ್ಣನು ಕೊಂಡೊಯ್ಯುತ್ತಿರುವ ವಿಚಾರವನ್ನು ಇಂದ್ರನ ಗಮನಕ್ಕೆ ತರುತ್ತಾರೆ. ಇಬ್ಬರ ನಡುವೆ ಯುದ್ಧ ನಡೆದು, ಕೃಷ್ಣನು ವಿಜಯಿಯಾಗಿ, ಪಾರಿಜಾತವೆಂಬ ಅಮೂಲ್ಯ ವೃಕ್ಷ ಭೂಲೋಕದ ದ್ವಾರಕೆ ಸೇರುತ್ತದೆಯೆಂಬುದು ಪ್ರಚಲಿತದಲ್ಲಿರುವ ಕಥೆ. ಸತ್ಯಭಾಮೆಯ ಅಂಗಳದಲ್ಲಿ ಪಾರಿಜಾತ ಗಿಡ ನೆಟ್ಟ ಕೃಷ್ಣ, ಅದರ ಗೆಲ್ಲುಗಳು ಬಾಗಿ ರುಕ್ಮಿಣಿಯ ಅಂಗಳಕ್ಕೂ ಹೂಗಳು ಉದುರುವಂತೆ ಮಾಡಿ, ಇಬ್ಬರಲ್ಲೂ ತನಗಿರುವ ಪ್ರೀತಿಯನ್ನು ವ್ಯಕ್ತಪಡಿಸಿದ್ದಲ್ಲದೆ, ಸಮತೋಲನವನ್ನು ಜಾಣತನದಿಂದ ನಿಭಾಯಿಸಿದ. ಪಾರಿಜಾತ ಹೂ ಕೃಷ್ಣಪೂಜೆಗೆ ಶ್ರೇಷ್ಠವೆಂಬ ನಂಬಿಕೆ ನಮ್ಮಲ್ಲಿರುವುದು ಈ ಕಥನದಿಂದಾಗಿಯೆ. ಹಾಗೆಯೇ ಉತ್ತರ ಭಾರತದ ಮಂದಿ ಪಾರಿಜಾತವನ್ನು ಹರಿಸಿಂಗಾರವೆಂದು ಕರೆಯುತ್ತಾರೆ.

ಪಾರಿಜಾತವು ಹೂ ಉದುರಿಸುವ ಕುರಿತೂ ಒಂದು ಮನ ಮಿಡಿಯುವ ಕಥೆಯಿದೆ:

ಪಾರಿಜಾತಕ ಹೆಸರಿನ ರಾಜಕುವರಿಯೊಬ್ಬಳಿದ್ದಳು. ಆಕೆಗೆ ಸೂರ್ಯದೇವನ ಮೇಲೆ ಪ್ರೇಮಾಂಕುರವಾಗುತ್ತದೆ. ಆದರೆ ಸೂರ್ಯನು ಆಕೆಯ ಪ್ರೇಮವನ್ನು ನಿರಾಕರಿಸುತ್ತಾನೆ. ಹತಾಶೆಯಲ್ಲಿ ಪಾರಿಜಾತಕ ತನ್ನನ್ನು ತಾನೇ ದಹಿಸಿಕೊಳ್ಳುತ್ತಾಳೆ. ಆಕೆಯ ಬೂದಿಯಿಂದ ಹುಟ್ಟಿದ ಗಿಡವೇ ಪಾರಿಜಾತ. ಸೂರ್ಯನನ್ನು ನೋಡಲಾಗದೆ ರಾತ್ರಿ ಅರಳುವ ಪಾರಿಜಾತ, ಸೂರ್ಯನ ಕಿರಣ ಸೋಕಿದೊಡನೆ ನೆಲಕ್ಕೆ ಬೀಳುತ್ತದೆ. ಇದು ಪಾರಿಜಾತಕ ರಾಜಕುಮಾರಿಯ ಕಂಬನಿ ಎನ್ನುತ್ತದೆ ಈ ಕಥೆ. ಪಾರಿಜಾತದ ಈ ಕಥೆಯನ್ನೆ ಮನದಲ್ಲಿಟ್ಟು, ಕವಿ ವಿ. ಚಂದ್ರಶೇಖರ ನಂಗಲಿ 'ಪಾರಿಜಾತ' ಕವನದಲ್ಲಿ ಈ ಸಾಲುಗಳನ್ನು ಬರೆದಿದ್ದಾರೆ:

ಸೂರ್ಯನ ಪ್ರಿಯತಮೆಯಾಗಿ ಬೆಳೆದೆ  
ಕೈಕೊಟ್ಟ ಪ್ರಿಯಸೂರ್ಯನ ವಿರಹದಲಿ  
ಸುಟ್ಟು ಬೂದಿಯಾಗಿ ಮರುಹುಟ್ಟಾದೆ!  
ಪೂರ್ವಜನ್ಮದ ಸ್ಮೃತಿಯಲಿ ಸೂರ್ಯ  
ಕಿರಣ ಸ್ಪರ್ಶಕೆ ಮೊದಲೇ ಉದುರುವೆ!  
ಸೂರ್ಯಾಸ್ತದಿ ಅರಳಿ ಪರಿಮಳಿಸುವೆ!  
ರಜನಿಗಂಧದ ಮಲ್ಲಿಗೆಯಾಗಿ ಉಳಿದೆ!

ಹೀಗೆ ಪಾರಿಜಾತದ ಅಂದ, ಸುವಾಸನೆ ಹಾಗೂ ಅದಕ್ಕಿರುವ ಸ್ವರ್ಗೀಯ ಭಾವನೆಯಿಂದ ಅತೀವ ಮೋಹಕ್ಕೊಳಗಾದ ನಾನು, ಮಧುವನ ಬಡಾವಣೆಯಲ್ಲಿ ಪುಟ್ಟ ಮನೆಯೊಂದನ್ನು ಖರೀದಿಸಿದಾಗ, ಮನೆ ಮುಂದೆ ಇರುವ ಜಾಗದಲ್ಲಿ ಪಾರಿಜಾತ ಮರ ಬೆಳೆಸಬೇಕೆಂದು ನಿಶ್ಚಯಿಸಿದೆ. ಅದೊಂದು ದಿನ ನಾನು ಕಚೇರಿ ಕೆಲಸ ಮುಗಿಸಿ ಮನೆಗೆ ಬಂದಾಗ ಪಾಲಿಥಿನ್ ಚೀಲದಲ್ಲಿ ಬೆಳೆಸಿದ ಪಾರಿಜಾತದ ಒಂದು ಗಿಡ ಮನೆ ಬಾಗಿಲಿನಲ್ಲಿತ್ತು. ನರ್ಸರಿಯಾತ ತಳ್ಳುಗಾಡಿಯಲ್ಲಿ ಹೂಗಿಡಗಳನ್ನು ಮಾರಿಕೊಂಡು ಮನೆಯೆದುರು ಬಂದಾಗ, ಎಪ್ಪತ್ತು ರೂಪಾಯಿಗೆ ಅದನ್ನು ಖರೀದಿಸಿರುವುದಾಗಿ ಹೇಳಿದ ನನ್ನಾಕೆ, 'ಮನೆಯೆದುರು ಪಾರಿಜಾತ ಗಿಡ ನೆಡುವ ನಿಮ್ಮ ಯೋಜನೆಗೆ ನನ್ನ ಕೊಡುಗೆ' ಎಂದಳು.

ಮಾರನೇ ಮುಂಜಾನೆಯೇ ಮನೆಯೆದುರು ಇದನ್ನು ನೆಡುವುದೆಂದು ತೀರ್ಮಾನಿಸಿದೆವು. ಆದರೆ ಗಿಡವನ್ನು ಜಾನುವಾರುಗಳಿಂದ ಕಾಪಾಡಲು ವ್ಯವಸ್ಥೆ ಕೂಡ ಆಗಬೇಕಲ್ಲ. ಹೇಳಿ ಕೇಳಿ ನಮ್ಮ ಬೀದಿಯಲ್ಲಿ ಹಸುಗಳ ಓಡಾಟ ಜಾಸ್ತಿ. ಅವೋ ದೈತ್ಯ ಗಾತ್ರದ ಸಿಂಧಿ ಹಸುಗಳು. ಅವುಗಳ ಬಾಯಿಗೆ ಸಿಕ್ಕ ದಾಸವಾಳ ಗಿಡಗಳು ಬೇಲಿಯ ಸಮಕ್ಕೆ ಸದಾ ಅಟೊ ಟ್ರಿಮ್ ಆಗುವುದು ನೋಡಿದ ನಮಗೆ, ಬಲವಾದ ರಕ್ಷಣೆಯಿಲ್ಲದಿದ್ದರೆ ಪಾರಿಜಾತ ಗಿಡ ಉಳಿಯುವುದು ಅನುಮಾನ ಎನಿಸಿತ್ತು. ನಮ್ಮ ಸಂಭಾಷಣೆಯನ್ನು ಕೇಳಿಸಿಕೊಳ್ಳುತ್ತಿದ್ದ ಮನೆ ಕೆಲಸದಾಕೆ, 'ಪಾರಿಜಾತ ಎಲೆಗಳನ್ನ ಹಸುಗಳು ಮುಟ್ಟಕ್ಕಿಲ್ಲಣ್ಣಾ...' ಎಂದಳು. ಎಲೆ ದೊರಗಾಗಿರುವುದು ಹಾಗೂ ಅದಕ್ಕೆ ಕಹಿ ರುಚಿಯಿರುವುದರಿಂದ ಹಸುಗಳು ಅದರ ತಂಟೆಗೆ ಬರುವುದಿಲ್ಲ ಎಂದಳವಳು. ಆದರೆ ನನಗೆ ಆಕೆಯ ಮಾತಿನಲ್ಲಿ ನಂಬಿಕೆ ಬರಲಿಲ್ಲ. ಪ್ಲಾಸ್ಟಿಕ್ಕನ್ನೇ ತಿನ್ನುವ ಪೇಟೆಯ ಹಸುಗಳು ಆಡುಸೋಗೆಯನ್ನೂ ತಿಂದಾವು ಎಂದುಕೊಳ್ಳುತ್ತ, ಮುಂಜಾನೆ ನೆಟ್ಟ ಪಾರಿಜಾತ ಗಿಡದ ಸುತ್ತ ಮುಳ್ಳುಕಂಟಿಗಳನ್ನು ಸುತ್ತಿ, ಕೆಲಸಕ್ಕೆ ನಡೆದೆ.

ನಮ್ಮ ಮುದ್ದಿನಿಂದ ಅನತಿ ದಿನಗಳಲ್ಲೆ ಪಾರಿಜಾತ ಗಿಡವು ಚೆನ್ನಾಗಿ ಬೆಳೆದು ಸುತ್ತಲೂ ಹರಡಿದ್ದ ಮುಳ್ಳುಕಂಟಿಗಳನ್ನು ಮೀರಿ ಎತ್ತರಕ್ಕೆ ಬೆಳೆಯಲಾರಂಭಿಸಿತು. ಅದೊಂದು ದಿನ ಬೀಡಾಡಿ ಹಸುವೊಂದು ಚಿಗುರಿದ್ದ ಗಿಡಕ್ಕೆ ಬಾಯಿ ಹಾಕಿತು. ಪೇಪರ್ ಓದುತ್ತಿದ್ದ ನಾನು, ಪೇಪರ್ ಬಿಸುಟು, ಗೇಟ್ ತೆರೆದು ಓಡಿ ಬರುವಾಗ, ಚಿಗುರೆಲೆಗಳನ್ನು ಒಂದೇ ಬಾಯಿಗೆ ಆಪೋಶನ ತೆಗೆದುಕೊಂಡ ಹಸು, ಅಲ್ಲಿಂದ ಕಾಲ್ತೆಗೆಯಿತು. ಈ ರೀತಿ ಅನೇಕ ಬಾರಿ ಆದಾಗ, ಬಿದಿರಿನ ಗಳವನ್ನು ತರಿಸಿ, ಪಾರಿಜಾತ ಗಿಡದ ಸುತ್ತಲೂ ಬಲವಾದ ಬೇಲಿಯನ್ನು ಹಾಕಿಸಿದೆ. ತದನಂತರ ಗಿಡ ಚೆನ್ನಾಗಿ ಬೆಳೆದು ಸ್ವಲ್ಪ ಎತ್ತರಕ್ಕೆ ಬಂದಿತು. ಆದರೂ ಗಿಡ ಟಿಸಿಲೊಡೆದು ಬೇಲಿಯಿಂದ ಹೊರ ಚಾಚಿದಾಗಲೆಲ್ಲ ಹಸುಗಳು ಮೇಯಲು ಹಾತೊರೆಯುತ್ತಿದ್ದವು. ಅವುಗಳ ಬಾಯಿಯಿಂದ ರಕ್ಷಣೆ ಮಾಡುವುದೇ ಮನೆಮಂದಿಗೆ ಅತಿದೊಡ್ಡ ಸವಾಲಾಗಿಬಿಟ್ಟಿತು. ನಮ್ಮ ಕಾಳಜಿ ಫಲ ಕೊಡದೆ ಇರಲಿಲ್ಲ. ವರ್ಷವೆರಡರಲ್ಲೇ ಪಾರಿಜಾತ ಪುಟ್ಟ ಮರವಾಗಿ ಬೆಳೆಯಿತಲ್ಲ!

ನಾನು ಅವರಿವರನ್ನು ಕೇಳಿ ಹಾಗೂ ಗೂಗಲ್ ಮಾಡಿ ತಿಳಿದ ಪ್ರಕಾರ ಪಾರಿಜಾತ ಗಿಡ ಬೆಳೆದು ಹೂ ಉದುರಿಸಲು ಕನಿಷ್ಠ ಮೂರು ವರ್ಷಗಳಾದರೂ ಬೇಕು. ನಮ್ಮ ಮುದ್ದಿನ ಪಾರಿಜಾತಕ್ಕೆ ಎರಡು ವರ್ಷ ಸಂದಿರಬಹುದಷ್ಟೆ. ದೀಪಾವಳಿ ಬಂದುಬಿಟ್ಟಿತ್ತು. ನರಕ ಚತುರ್ದಶಿಯ ಸಂಜೆ ಗಿಡದ ಬಳಿ ಆಕಸ್ಮಿಕವಾಗಿ ಹೋದಾಗ, ಅದೇನಾಶ್ಚರ್ಯ! ನಮ್ಮ ಪುಟ್ಟ ಪಾರಿಜಾತ ಗಿಡ ಒಂದೇ ಒಂದು ಹೂ ಅರಳಿಸಿ ಬಿಮ್ಮನೆ ನಿಂತಿತ್ತು. ನರಕ ಚತುರ್ದಶಿಯಂದೇ ಮೊದಲ ಹೂ ಕೊಟ್ಟ ಪಾರಿಜಾತವು ಕೃಷ್ಣನಿಗೂ ತನಗೂ ಇರುವ ಅವಿನಾಭಾವ ಸಂಬಂಧವನ್ನು ಸಾರಿ ಹೇಳಿದಂತಿತ್ತು. ನನಗೋ ಪುಳಕ, ಧನ್ಯತಾಭಾವ. ಆ ಹೂವಿನ ಫೋಟೊ ಹೊಡೆದದ್ದೇನು, ವಾಟ್ಸಾಪ್‌ನಲ್ಲಿ ಬಂಧುಮಿತ್ರರೊಂದಿಗೆ, ಗೆಳೆಯರೊಂದಿಗೆ ಹಂಚಿಕೊಡದ್ದೇನು! ಆ ದೀಪಾವಳಿ ನಮ್ಮೆಲ್ಲರಿಗೂ ವಿಶೇಷ ದೀಪಾವಳಿಯೆನಿಸಿತು. ಬಹಳ ಭಕ್ತಿಯಿಂದ ಆ ಹೂವನ್ನು ಕೃಷ್ಣನಿಗೆ ಸಮರ್ಪಿಸಿದ್ದು ನಮ್ಮೆಲ್ಲರಿಗೂ ಮರೆಯಲಾಗದ ಅನುಭವ.

ಪಾರಿಜಾತದ ಸೀಸನ್‌ನಲ್ಲಿ ಮುಂಜಾನೆ ಚುಮು ಚುಮು ಚಳಿಗೆ ಎದ್ದು ಹೊರಗೆ ಬಂದರೆ, ಪಾರಿಜಾತ ತರುಗಳ ಸುತ್ತಲೂ ನರುಗಂಪಿನ ಮೃದು ಹೂಗಳ ಚಾಪೆ ಹಾಸಿದಂತೆ ಕಾಣುತ್ತಿದೆ. ಸಂಜೆ ತಂಗಾಳಿಯಲ್ಲಿ ತೇಲಿಬರುತಿದೆ ಪಾರಿಜಾತದ ನವಿರು ಸುಗಂಧ. ಮುಂಬಾಗಿಲಲ್ಲಿ ಎದುರುಗೊಳ್ಳುವ ಪಾರಿಜಾತದ ಪರಿಷೆ ನೋಡುವುದೇ ಒಂದು ಸೊಗಸು. ಮಣ್ಣಿನ ಮೇಲೆ ಹರಡಿರುವ ಪಾರಿಜಾತ ಹೂಗಳನ್ನು ಮುತ್ತು ಹೆಕ್ಕಿದಂತೆ ಆರಿಸುವ ಸಡಗರದಲ್ಲಿ ಹರಿವಾಣ ತುಂಬಿದ್ದೇ ಗೊತ್ತಾಗುವುದಿಲ್ಲ. ಮನೆದೇವರ ಪೂಜೆಗಾಗುವಷ್ಟು ತೆಗೆದಿರಿಸಿ, ಉಳಿದ ಹೂಗಳನ್ನು ನೆರೆಹೊರೆಯವರಿಗೆ ಹಂಚಿದಲ್ಲಿ ಅದೇನೊ ಆನಂದ, ಸಾರ್ಥಕತೆ. ಪಾರಿಜಾತದ ಗೆಲ್ಲೊಂದು ಪಕ್ಕದ ಮನೆಯ ಅಂಗಳಕ್ಕೂ ಬಾಗಿ, ಅವರಿಗೂ ಹೂ, ನವಿರು ಸುಗಂಧವನ್ನು ನೀಡುತ್ತಿದೆ, ನಮಗೆ ಮುದ ನೀಡುತ್ತಿದೆ.

ಅಂಗಳದಲ್ಲಿ ಒಂದಿಷ್ಟು ಜಾಗವಿದ್ದಲ್ಲಿ ನೀವೂ ಒಂದು ಪಾರಿಜಾತದ ಗಿಡ ನೆಡಿ. ಕೃಷ್ಣನೊಡನೆ ಅನುಸಂಧಾನಕ್ಕೆ ಅದುವೆ ಸುಲಭ ವಿಧಾನ.

ಪ್ರತಿಕ್ರಿಯಿಸಿ: feedback@sudha.co.in